ST ALOYSIUS

(DEEMED TO BE UNIVERSITY)

MANGALURU, KARNATAKA 575003 - INDIA

ESTD : 1880

# Xavier board 25th Triennial Conference

# NEWS CLIPPINGS

## 18-10-2025 TO 21-10-2025

*Viajayavani 18-10-2025*

## ಸಂತ ಅಲೋಶಿಯಸ್ ವಿವಿಯಲ್ಲಿ ಸಮ್ಮೇಳನ

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ನಗರದ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ವತಿಯಿಂದ ಭಾರತದ ಕ್ಸೇವಿಯರ್ ಬೋರ್ಡ್ ಆಫ್ ಹೈಯರ್ ಎಜುಕೇಶನ್‌ನ 25ನೇ ತ್ರೈಮಾಸಿಕ ಸಮ್ಮೇಳನ ಅ.18ರಿಂದ 21ರವರೆಗೆ ನಡೆಯಲಿದೆ ಎಂದು ಸಂತ ಅಲೋಶಿಯಸ್ ವಿವಿ ಕುಲಪತಿ ಫಾ.ಡಾ.ಪ್ರವೀಣ್ ಮಾರ್ಟಿಸ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಮನಸ್ಸುಗಳನ್ನು ಸದೃಢಗೊಳಿಸಿ, ಬದಲಾವಣೆಯನ್ನು ಸ್ವೀಕರಿಸಿ: ಜಾಗತಿಕ ಭವಿಷ್ಯದ ಸಾಧನವಾಗಿ ಉನ್ನತ ಶಿಕ್ಷಣದ ಪುನರ್ ಕಲ್ಪನೆ ಮಾಡೋಣ’ ಎಂಬ ವಿಷಯದ ಬಗ್ಗೆ ಅಲೋಶಿಯಸ್ ವಿವಿ ಕ್ಯಾಂಪಸ್‌ನ ಎಲ್‌ಸಿಆರ್‌ಐ ಸಭಾಂಗಣದಲ್ಲಿ ಸಮ್ಮೇಳನ ಆಯೋಜಿಸಲಾಗಿದೆ ಎಂದರು.

ಈ ಸಮ್ಮೇಳನ ದೇಶದೆಲ್ಲೆಡೆಯ ಕ್ರೈಸ್ತ ಉನ್ನತ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು, ಶೈಕ್ಷಣಿಕ ನಾಯಕರು, ಪ್ರತಿನಿಧಿಗಳನ್ನು ಒಟ್ಟುಗೂಡಿಸಿ ಉನ್ನತ ಶಿಕ್ಷಣದ ಬದಲಾದ ಪ್ರಪಂಚದ ಬಗ್ಗೆ ಚಿಂತನೆಗೆ ವೇದಿಕೆ ಒದಗಿಸಲಿದೆ. ಅ.18ರಂದು ಸಂಜೆ 4ಕ್ಕೆ ನಾಗ್ಪುರದ ಆರ್ಚ್ ಬಿಷಪ್, ಸಿಬಿಸಿಐ ಶಿಕ್ಷಣ ಮತ್ತು ಸಂಸ್ಕೃತಿ ಆಯೋಗದ ಅಧ್ಯಕ್ಷ ಫಾ.ಡಾ.ಎಲಿಯಾಸ್ ಗೊನ್ಸಾಲ್ವಿಸ್ ದಿವ್ಯ ಬಲಿಪೂಜೆ ನೆರವೇರಿಸಲಿದ್ದಾರೆ. ರಾಜ್ಯದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಸಮ್ಮೇಳನ ಉದ್ಘಾಟಿಸಲಿದ್ದಾರೆ ಎಂದರು.

- ■ ಇಂದಿನಿಂದ 21ರವರೆಗೆ ಆಯೋಜನೆ
- ■ ಫಾ.ಡಾ.ಪ್ರವೀಣ್ ಮಾರ್ಟಿಸ್ ಮಾಹಿತಿ
- ■ ತಜ್ಞರ ಸಮಾಗಮ

ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯದ ಸಂಯುಕ್ತ ಕಾರ್ಯದರ್ಶಿ ಆರ್ಮ್‌ಸ್ಟ್ರಾಂಗ್ ಪಾಮೇ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಅ.19ರಂದು ಬಲಿಪೂಜೆಯನ್ನು ಮಂಗಳೂರು ಬಿಷಪ್ ಫಾ.ಡಾ.ಅಲೋಶಿಯಸ್ ಪಾವ್ಲ್ ಡಿಸೋಜ ನೆರವೇರಿಸಲಿದ್ದಾರೆ. ಸಮ್ಮೇಳನದಲ್ಲಿ ದೇಶ ವಿದೇಶಗಳ ತಜ್ಞರು ಭಾಗವಹಿಸಿ ಮಾತನಾಡಲಿದ್ದಾರೆ ಎಂದು ಹೇಳಿದರು.

ಕ್ಸೇವಿಯರ್ ಬೋರ್ಡ್ ಆಫ್ ಹೈಯರ್ ಎಜುಕೇಶನ್ ಅಧ್ಯಕ್ಷ ಫಾ.ಡಾ.ಜೋಜಿ ರೆಡ್ಡಿ, ಉಪಾಧ್ಯಕ್ಷ ಫಾ.ಗಿಲ್ಬರ್ಟ್ ಮಸ್ಕರೇನಸ್, ಪ್ರಧಾನ ಕಾರ್ಯದರ್ಶಿ ಭಗಿನಿ ಡಾ.ದೀಪ್ತಿ, ಸಂತ ಅಲೋಶಿಯಸ್ ವಿವಿ ಸಾರ್ವಜನಿಕ ಸಂಪರ್ಕ ಅಧಿಕಾರಿ ಚಂದ್ರಕಲಾ ಉಪಸ್ಥಿತರಿದ್ದರು.

# St Aloysius hosts seminar from today

*Times of India 18-10-2025*

**Mangaluru:** St Aloysius (Deemed to be University) will host the 25th Triennial Conference 2025 of the Xavier Board of Higher Education in India. The four-day conference, starting on Saturday, will bring together heads of Catholic higher educational institutions, academic leaders, and delegates from across India to deliberate on the evolving landscape of higher education.

It will be inaugurated by MC Sudhakar, minister for higher education. Armstrong Pame, joint secretary, department of higher education (DOHE), ministry of education, will grace the occasion as chief guest. Fr Praveen Martis, vice-chancellor of the St Aloysius (Deemed to be University), said on Friday that the theme of the conference will be 'Empowering Minds, Embracing Change: Reimagining Higher Education for a Global Tomorrow.' The Xavier Board of Higher Education in India, established in 1951, unites Catholic higher education institutions across the country and serves as a national platform for dialogue, reflection, and collaboration. Over its 74-year journey, the board promoted excellence and social commitment through annual and triennial conferences that build networks and leadership across India's Catholic universities and colleges.

*Varthabharathi 18-10-2025*

# ಇಂದಿನಿಂದ ಸಂತ ಅಲೋಶಿಯಸ್ ವಿವಿಯಲ್ಲಿ ಸಮ್ಮೇಳನ

ಮಂಗಳೂರು, ಅ.17: ಸಂತ ಅಲೋಶಿಯಸ್ ಪರಿಗಣಿತ ವಿವಿ ವತಿಯಿಂದ ಅ.18ರಿಂದ 21ರವರೆಗೆ ಕ್ಸೇವಿಯರ್ ಬೋರ್ಡ್ ಆಫ್ ಹೈಯರ್ ಎಜುಕೇಶನ್‌ನ 25ನೆ ತ್ರೈಮಾಸಿಕ ಸಮ್ಮೇಳನ ಆಯೋಜಿಸಲಾಗಿದೆ.

ನಗರದ ಪ್ರೆಸ್‌ಕ್ಲಬ್‌ನಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಸಂತ ಅಲೋಶಿಯಸ್ ವಿವಿಯ ಕುಲಪತಿ ರೆ.ಫಾ.ಡಾ.ಪ್ರವೀಣ್ ಮಾರ್ಟಿಸ್, 'ಮನಸ್ಸುಗಳನ್ನು ಸದೃಢಗೊಳಿಸಿ, ಬದಲಾವಣೆಯನ್ನು ಸ್ವೀಕರಿಸಿ, ಜಾಗತಿಕ ಭವಿಷ್ಯದ ಸಾಧನವಾಗಿ ಉನ್ನತ ಶಿಕ್ಷಣದ ಪುನರ್ ಕಲ್ಪನೆ ಮಾಡೋಣ' ಎಂಬ ವಿಷಯದಲ್ಲಿ ಅಲೋಶಿಯಸ್ ವಿವಿ ಕ್ಯಾಂಪಸ್‌ನ ಎಲ್‌ಸಿಆರ್‌ಐ ಸಭಾಂಗಣದಲ್ಲಿ ಸಮ್ಮೇಳನ ನಡೆಯಲಿದೆ ಎಂದರು.

ಸಮ್ಮೇಳನವು ದೇಶದೆಲ್ಲೆಡೆಯ ಕ್ರೈಸ್ತ ಉನ್ನತ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು, ಶೈಕ್ಷಣಿಕ ನಾಯಕರು ಮತ್ತು ಪ್ರತಿನಿಧಿಗಳನ್ನು ಒಟ್ಟುಗೂಡಿಸಿ ಉನ್ನತ ಶಿಕ್ಷಣದ ಬಗ್ಗೆ ಚಿಂತನೆ ಮತ್ತು ವೇದಿಕೆಯನ್ನು ಒದಗಿಸಲಿದೆ.

ಅ.18ರಂದು ಸಂಜೆ 4ಕ್ಕೆ ಬಲಿಪೂಜೆಯೊಂದಿಗೆ ಸಮ್ಮೇಳನ ಆರಂಭವಾಗಲಿದೆ. ರಾಜ್ಯದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಉದ್ಘಾಟನೆ ನೆರವೇರಿಸಲಿದ್ದು, ಭಾರತ ಸರಕಾರದ ಶಿಕ್ಷಣ ಸಚಿವಾಲಯದ ಸಂಯುಕ್ತ ಕಾರ್ಯದರ್ಶಿ ಆರ್ಮ್‌ಸ್ಟ್ರಾಂಗ್ ಪಾಮೇ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ನಾಗ್ಪುರದ ಆರ್ಚ್ ಬಿಷಪ್ ಹಾಗೂ ಸಿಬಿಸಿಐ ಶಿಕ್ಷಣ ಮತ್ತು ಸಂಸ್ಕೃತಿ ಆಯೋಗದ ಅಧ್ಯಕ್ಷ ರೆ.ಫಾ.ಡಾ.ಎಲಿಯಾಸ್ ಗೋನ್ಸಾಲ್ವಿಸ್ ದಿವ್ಯ ಬಲಿಪೂಜೆ ನೆರವೇರಿಸಲಿದ್ದಾರೆ. ಅ.19ರಂದು ಬಲಿಪೂಜೆಯನ್ನು ಮಂಗಳೂರು ಧರ್ಮಪ್ರಾಂತದ ಬಿಷಪ್ ರೆ.ಫಾ.ಡಾ.ಅಲೋಶಿಯಸ್ ಪೌಲ್ ಡಿಸೋಜ ನೆರವೇರಿಸಲಿದ್ದಾರೆ. ಸಮ್ಮೇಳನದ ಪ್ರಾಯೋಜಕತ್ವವನ್ನು ಉದ್ಯಮಿ ಡಾ.ರೊನಾಲ್ಡ್ ಕೊಲಾಸೊ ವಹಿಸಿದ್ದಾರೆ. ಸಮ್ಮೇಳನದಲ್ಲಿ ದೇಶ ವಿದೇಶಗಳ ತಜ್ಞರು ಭಾಗವಹಿಸಿ ಮಾತನಾಡಲಿದ್ದಾರೆ ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕ್ಸೇವಿಯರ್ ಬೋರ್ಡ್ ಆಫ್ ಹಯರ್ ಎಜುಕೇಶನ್‌ನ ಅಧ್ಯಕ್ಷ ರೆ.ಫಾ.ಡಾ. ಜೋಜಿ ರೆಡ್ಡಿ, ಉಪಾಧ್ಯಕ್ಷ ರೆ.ಫಾ.ಗಿಲ್ಬರ್ಟ್ ಮಸ್ಕರೇನ್ಹಸ್, ಪ್ರಧಾನ ಕಾರ್ಯದರ್ಶಿ ಭಗಿನಿ ಡಾ.ದೀಪ್ತಿ ಯುಎಫ್‌ಎಸ್ ಹಾಗೂ ಸಂತ ಅಲೋಶಿಯಸ್ ವಿವಿಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಚಂದ್ರಕಲಾ ಉಪಸ್ಥಿತರಿದ್ದರು.

*Indian Express 18-10-2025*

# St Aloysius University to host Xavier Board's 25th triennial conference

**EXPRESS NEWS SERVICE**
@Mangaluru

ST Aloysius (Deemed to be University), Mangaluru, will host the four-day 25th Triennial Conference 2025 of the Xavier Board of Higher Education in India. Themed 'Empowering Minds, Embracing Change: Reimagining Higher Education for a Global Tomorrow; the conference will be commence from Saturday at the LCRI Hall of the university. President of the Xavier Board of Higher Education in India Dr Fr L Joji Reddy SJ said: "The Xavier Board of Higher Education in India, established in 1951, is a large body comprising 420 members and 200 associate members." The triennial conference will be inaugurated by Higher Education Minister Dr M C Sudhakar, along with joint secretary, Department of Higher Education (DoHE), Ministry of Education Armstrong Pame. Former acting vice-chancellor of Bangalore University Dr Cynthia Menezes will deliver the keynote address on 'Innovating for Inclusion: Higher Education at the Threshold of Global Leadership'.

The conference will also mark the launch of the Global Bridges Initiative, a networking platform aimed at promoting collaboration between Indian Catholic institutions and international universities for research, academic exchange, and sustainability initiatives. University vice-chancellor Dr Praveen Martis said: "During the four-day conference, 300 delegates and 16 resource persons will participate in various sessions and discussions.



ESTD : 1880

*Udayavani 18-10-2025*

# ಇಂದಿನಿಂದ ಸಂತ ಅಲೋಶಿಯಸ್ ವಿವಿಯಲ್ಲಿ 25ನೇ ತ್ರೈಮಾಸಿಕ ಸಮ್ಮೇಳನ

**ಮಹಾನಗರ, ಅ. ಅ.17:** ಭಾರತದ ಕ್ಸೇವಿಯರ್ ಬೋರ್ಡ್ ಆಫ್ ಹೈಯರ್ ಎಜುಕೇಶನ್‌ನ 25ನೇ ತ್ರೈಮಾಸಿಕ ಸಮ್ಮೇಳನ ಅ. 18ರಿಂದ ಅ. 21ರ ವರೆಗೆ ಸಂತ ಅಲೋಶಿಯಸ್ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿದೆ.

ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂತ ಅಲೋಶಿಯಸ್ ವಿವಿಯ ಕುಲಪತಿ ವಂ| ಡಾ| ಪ್ರವೀಣ್ ಮಾರ್ಟಿಸ್ ಅವರು 'ಮನಸ್ಸುಗಳನ್ನು ಸದೃಢಗೊಳಿಸಿ, ಬದಲಾವಣೆಯನ್ನು ಸ್ವೀಕರಿಸಿ: ಜಾಗತಿಕ ಭವಿಷ್ಯದ ಸಾಧನವಾಗಿ ಉನ್ನತ ಶಿಕ್ಷಣದ ಪುನರ್ ಕಲ್ಪನೆ ಮಾಡೋಣ' ಎಂಬ ವಿಷಯದಲ್ಲಿ ಅಲೋಶಿಯಸ್ ವಿವಿ ಕ್ಯಾಂಪಸ್‌ನ ಎಲ್ ಸಿಆರ್ಐ ಸಭಾಂಗಣದಲ್ಲಿ ಸಮ್ಮೇಳನ ನಡೆಯಲಿದೆ ಎಂದರು. ಅ.18ರಂದು ಸಂಜೆ 4 ಗಂಟೆಗೆ ಬಲಿಪೂಜೆಯೊಂದಿಗೆ ಸಮ್ಮೇಳನ ಆರಂಭವಾಗಲಿದೆ. ಉನ್ನತ ಶಿಕ್ಷಣ ಸಚಿವ ಡಾ| ಎಂ.ಸಿ. ಸುಧಾಕರ್ ಉದ್ಘಾಟಿಸಲಿದ್ದಾರೆ. ಕೇಂದ್ರ ಸರಕಾರದ ಶಿಕ್ಷಣ ಸಚಿವಾಲಯದ ಸಂಯುಕ್ತ ಕಾರ್ಯದರ್ಶಿ ಆರ್ಮ್‌ಸ್ಟ್ರಾಂಗ್ ಪಾಮೇ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ನಾಗ್ಪುರದ ಆರ್ಚ್‌ಬಿಷಪ್ ಹಾಗೂ ಸಿಬಿಸಿಐ ಶಿಕ್ಷಣ ಮತ್ತು ಸಂಸ್ಕೃತಿ ಆಯೋಗದ ಅಧ್ಯಕ್ಷ ರೆ| ಡಾ| ಎಲಿಯಾಸ್ ಗೋನ್ಸಾಲ್ವಿಸ್ ದಿವ್ಯ ಬಲಿಪೂಜೆ ನೆರವೇರಿಸಲಿದ್ದಾರೆ. ಅ. 19ರಂದು ಬಲಿಪೂಜೆಯನ್ನು ಮಂಗಳೂರು ಧರ್ಮಪ್ರಾಂತದ ಬಿಷಪ್ ರೆ| ಡಾ| ಅಲೋಶಿಯಸ್ ಪೌಲ್ ಡಿ'ಸೋಜಾ ನೆರವೇರಿಸಲಿದ್ದಾರೆ. ಸಮ್ಮೇಳನದ ಪ್ರಾಯೋಜಕತ್ವವನ್ನು ಉದ್ಯಮಿ ಡಾ|ರೊನಾಲ್ಡ್ ಕೊಲಾಸೊ ವಹಿಸಲಿದ್ದಾರೆ ಎಂದರು.

ಕ್ಸೇವಿಯರ್ ಬೋರ್ಡ್ ಆಫ್ ಹೈಯರ್ ಎಜುಕೇಶನ್‌ನ ಅಧ್ಯಕ್ಷ ರೆ|ಡಾ| ಜೋಜಿ ರೆಡ್ಡಿ, ಉಪಾಧ್ಯಕ್ಷ ರೆ|ಫಾ|ಗಿಲ್ಬರ್ಟ್ ಮಸ್ಕರೇನಸ್, ಪ್ರಧಾನ ಕಾರ್ಯದರ್ಶಿ ಭ.ಡಾ| ದೀಪ್ತಿ ಹಾಗೂ ಸಂತ ಅಲೋಶಿಯಸ್ ವಿವಿ ಸಾರ್ವಜನಿಕ ಸಂಪರ್ಕ ಅಧಿಕಾರಿ ಚಂದ್ರಕಲಾ ಉಪಸ್ಥಿತರಿದ್ದರು.

*The Hindu 18-10-2025*

# XXV Triennial Conference-2025 to begin today

**The Hindu Bureau**
MANGALURU

St. Aloysius (Deemed to be University), Mangaluru, will host the XXV Triennial Conference-2025 of the Xavier Board of Higher Education on the theme 'Empowering Minds, Embracing Change: Reimagining Higher Education for a Global Tomorrow,' from October 18 to 21.

The university Vice-Chancellor Praveen Martis told reporters here on Friday that the event will bring together heads of Catholic Higher Educational Institutions, academic leaders, and delegates from across the country to deliberate on the evolving landscape of higher education.

The board, established in 1951, unites Catholic Higher Educational Institutions across the country and serves as a national platform for dialogue, reflection, and collaboration.

He said that hosting the conference is a proud milestone for St. Aloysius, a Jesuit institution founded in 1880, renowned for its 145-year legacy of transformative education. With the motto 'Lucet et Ardet' (Shine to Enkindle), the university stands as part of a global Jesuit educational network spanning over 105 countries.

He said the conference seeks to reimagine Catholic higher education in the face of rapid transformation and global interdependence, calling institutions to foster critical thinking, creativity, and global citizenship. It emphasises the integration of faith and innovation in building institutions that are spiritually grounded, intellectually dynamic, and socially inclusive. Minister for Higher Education M.C. Sudhakar will inaugurate the conferenceat 4 p.m.

Samyukta Karnataka 18-10-2025

# 18ರಿಂದ ಸಂತ ಅಲೋಶಿಯಸ್‌ನ 25ನೇ ತ್ರೈಮಾಸಿಕ ಸಮ್ಮೇಳನ

ಮಂಗಳೂರು: ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದಿಂದ ಕ್ಸೇವಿಯರ್ ಬೋರ್ಡ್ ಆಫ್ ಹೈಯರ್ ಎಜುಕೇಶನ್‌ನ 25ನೇ ತ್ರೈಮಾಸಿಕ ಸಮ್ಮೇಳನ ಅ.18ರಿಂದ 21ರವರೆಗೆ ಆಯೋಜಿಸಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಸಂತ ಅಲೋಶಿಯಸ್ ವಿವಿಯ ಕುಲಪತಿ ರೆ.ಫಾ.ಡಾ.ಪ್ರವೀಣ್ ಮಾರ್ಟಿಸ್, 'ಮನಸ್ಸುಗಳನ್ನು ಸದೃಢಗೊಳಿಸಿ, ಬದಲಾವಣೆಯನ್ನು ಸ್ವೀಕರಿಸಿ: ಜಾಗತಿಕ ಭವಿಷ್ಯದ ಸಾಧನವಾಗಿ ಉನ್ನತ ಶಿಕ್ಷಣದ ಪುನರ್ ಕಲ್ಪನೆ ಮಾಡೋಣ' ಎಂಬ ವಿಷಯದಲ್ಲಿ ಅಲೋಶಿಯಸ್ ವಿವಿ ಕ್ಯಾಂಪಸ್ ನ ಎಲ್ಸಿಆರ್‌ಐ ಸಭಾಂಗಣದಲ್ಲಿ ಸಮ್ಮೇಳನ ನಡೆಯಲಿದೆ ಎಂದರು.

ಸಮ್ಮೇಳನವು ದೇಶದೆಲ್ಲೆಡೆಯ ಕ್ರೈಸ್ತ ಉನ್ನತ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು, ಶೈಕ್ಷಣಿಕ ನಾಯಕು ಮತ್ತು ಪ್ರತಿನಿಧಿಗಳನ್ನು ಒಟ್ಟುಗೂಡಿಸಿ ಉನ್ನತ ಶಿಕ್ಷಣದ ಬದಲಾದ ಪ್ರಪಂಚದ ಬಗ್ಗೆ ಚಿಂತನೆ ಮತ್ತು ವೇದಿಕೆಯನ್ನು ಒದಗಿಸಲಿದೆ.

ಅ.18ರಂದು ಸಂಜೆ 4 ಗಂಟೆಗೆ ಬಲಿಪೂಜೆಯೊಂದಿಗೆ ಸಮ್ಮೇಳನ ಆರಂಭವಾಗಲಿದೆ. ರಾಜ್ಯದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಉದ್ಘಾಟನೆ ನೆರವೇರಿಸಲಿದ್ದು, ಭಾರತ ಸರಕಾರದ ಶಿಕ್ಷಣ ಸಚಿವಾಲಯದ ಸಂಯುಕ್ತ ಕಾರ್ಯದರ್ಶಿ ಆರ್ಮ್‌ಸ್ಟ್ರಾಂಗ್ ಪಾಮೇ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ನಾಗ್ಪುರದ ಆರ್ಚ್ ಬಿಷಪ್ ಹಾಗೂ ಸಿಬಿಸಿಐ ಶಿಕ್ಷಣ ಮತ್ತು ಸಂಸ್ಕೃತಿ ಆಯೋಗದ ಅಧ್ಯಕ್ಷ ರೆ.ಫಾ. ಡಾ.ಎಲಿಯಾಸ್ ಗೋನ್ಸಾಲ್ವಿಸ್ ದಿವ್ಯ ಬಲಿಪೂಜೆ ನೆರವೇರಿಸಲಿದ್ದಾರೆ. ಅ.19ರಂದು ಬಲಿಪೂಜೆಯನ್ನು ಮಂಗಳೂರು ಧರ್ಮಪ್ರಾಂತದ ಬಿಷಪ್ ರೆ.ಫಾ.ಡಾ.ಅಲೋಶಿಯಸ್ ಪೌಲ್ ಡಿಸೋಜ ನೆರವೇರಿಸಲಿದ್ದಾರೆ. ಸಮ್ಮೇಳನದ ಪ್ರಾಯೋಜಕತ್ವವನ್ನು ಉದ್ಯಮಿ ಡಾ.ರೊನಾಲ್ಡ್ ಕೊಲಾಸೊ ವಹಿಸಿದ್ದಾರೆ. ಸಮ್ಮೇಳನದಲ್ಲಿ ದೇಶ ವಿದೇಶಗಳ ತಜ್ಞರು ಭಾಗವಹಿಸಿ ಮಾತನಾಡಲಿದ್ದಾರೆ ಎಂದು ಹೇಳಿದರು.

ಸಕ್ಸೇವಿಯರ್ ಬೋರ್ಡ್ ಆಫ್ ಹಯರ್ ಎಜಕೇಶನ್ನ ಅಧ್ಯಕ್ಷ ರೆ.ಫಾ.ಡಾ.ಜೋಜಿ ರೆಡ್ಡಿ, ಉಪಾಧ್ಯಕ್ಷ ರೆ.ಫಾ.ಗಿಲ್ಬರ್ಟ್ ಮಸ್ಕರೇನಸ್, ಪ್ರಧಾನ ಕಾರ್ಯದರ್ಶಿ ಭಗಿನಿ ಡಾ.ದೀಪ್ತಿ ಯುಎಫ್‌ಎಸ್ ಹಾಗೂ ಸಂತ ಅಲೋಶಿಯಸ್ ವಿವಿ ಸಾರ್ವಜನಿಕ ಸಂಪರ್ಕ ಅಧಿಕಾರಿ ಚಂದ್ರಕಲಾ ಉಪಸ್ಥಿತರಿದ್ದರು.

*Viajayakarnataka 19-10-2025*

# ವಿದೇಶಿ ವಿವಿಗಳ ಆಗಮನ ಖಾಸಗಿ ವಿವಿಗಳಿಗೆ ಸವಾಲು: ಸಚಿವ ಸುಧಾಕರ್

**ವಿಕ ಸುದ್ದಿಲೋಕ** ಮಂಗಳೂರು

ಕರ್ನಾಟಕದಲ್ಲಿ ಕ್ಯಾಂಪಸ್‌ಗಳನ್ನು ಸ್ಥಾಪಿಸುವ ವಿದೇಶಿ ವಿಶ್ವವಿದ್ಯಾಲಯಗಳು ಅಸ್ತಿತ್ವದಲ್ಲಿರುವ ಖಾಸಗಿ ವಿಶ್ವವಿದ್ಯಾಲಯಗಳನ್ನು ಮೇಲ್ದರ್ಜೆಗೇರಿಸುವ ಸವಾಲನ್ನು ಎದುರಿಸಬೇಕಾಗುತ್ತದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು.

ಶನಿವಾರ ನಗರದ ಸಂತ ಅಲೋಶಿಯಸ್ ಕಾಲೇಜಿನಲ್ಲಿ ಭಾರತದಲ್ಲಿ ಕ್ಷೇವಿಯರ್ ಉನ್ನತ ಶಿಕ್ಷಣ ಮಂಡಳಿಯ 25 ನೇ ತ್ರೈವಾರ್ಷಿಕ ಸಮ್ಮೇಳನ 2025ರ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಈ ವಿದೇಶಿ ವಿವಿಗಳು ಖಾಸಗಿ ವಿಶ್ವವಿದ್ಯಾಲಯಗಳಲ್ಲಿರುವ ದೇಶೀಯವಾಗಿ ಸಮಾನ ಪದವಿಗಳನ್ನು ನೀಡುವ ಮೂಲಕ ಸ್ಪರ್ಧೆ ನೀಡುತ್ತಿವೆ. ವಿದ್ಯಾರ್ಥಿಗಳು ವಿದೇಶಕ್ಕೆ ಪ್ರಯಾಣಿಸುವ ಅಗತ್ಯವನ್ನು ಕಡಿಮೆ ಮಾಡುತ್ತದೆ. ಈ ಬೆಳವಣಿಗೆಯು ಖಾಸಗಿ ವಿಶ್ವವಿದ್ಯಾಲಯಗಳು ಸಹ ಅದೇ ಪಠ್ಯಕ್ರಮವನ್ನು ತರುವ ಮೂಲಕ ಅಥವಾ ಇಲ್ಲಿ ಅದೇ ಶಿಕ್ಷಣದ ಗುಣಮಟ್ಟವನ್ನು ಸಾಧಿಸುವ ಸವಾಲುಗಳನ್ನು ತಂದು ಹಾಕುತ್ತಿದೆ. ಇದು ರಾಜ್ಯದಲ್ಲಿ ನಡೆಯುತ್ತಿರುವ ದೊಡ್ಡ ಬದಲಾವಣೆಯಾಗಿದೆ ಎಂದರು.

ರಾಜ್ಯದಲ್ಲಿ ಲ್ಯಾಂಕಾಸ್ಟರ್ ತನ್ನ ಕ್ಯಾಂಪಸ್‌ವನ್ನು ಸ್ಥಾಪಿಸುತ್ತಿರುವ ಎರಡನೇ ವಿದೇಶಿ ವಿಶ್ವವಿದ್ಯಾಲಯವಾಗಿದೆ. ಯುಕೆಯ ಲಿವರ್‌ಪೂಲ್ ವಿಶ್ವವಿದ್ಯಾಲಯವು ಈಗಾಗಲೇ ಕರ್ನಾಟಕ ಸರಕಾರದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಹೆಚ್ಚುವರಿಯಾಗಿ ಇಂಪೀರಿಯಲ್ ಕಾಲೇಜು ಲಂಡನ್ ತನ್ನ ಸಂಶೋಧನಾ ಕೇಂದ್ರ ತೆರೆದಿದೆ. ಹೆಚ್ಚಿನ ಸಂಸ್ಥೆಗಳು ಮುಂದೆ ಬರುತ್ತಿದೆ ಎಂದರು.

**37 ಸಾವಿರ ಬಾಲಕಿಯರಿಗೆ ಆರ್ಥಿಕ ನೆರವು:** ಮಹಿಳಾ ವಿದ್ಯಾರ್ಥಿಗಳನ್ನು ಸಬಲೀಕರಣಗೊಳಿಸುವ ಮಹತ್ವದ ಹೆಜ್ಜೆಯಾಗಿ ರಾಜ್ಯವು ಸಾರ್ವತ್ರಿಕ ವಿದ್ಯಾರ್ಥಿ ವೇತನ ಕಾರ್ಯಕ್ರಮವನ್ನು ಪ್ರಾರಂಭಿಸಲು ಅಜೀಂ ಪ್ರೇಮ್‌ಜಿ ಫೌಂಡೇಶನ್‌ನೊಂದಿಗೆ ಪಾಲುದಾರಿಕೆ ಹೊಂದಿದೆ. ಉನ್ನತ ಶಿಕ್ಷಣ ಪಡೆಯುತ್ತಿರುವ ಸುಮಾರು 37 ಸಾವಿರ ಬಾಲಕಿಯರಿಗೆ ಆರ್ಥಿಕ ನೆರವು ನೀಡುತ್ತದೆ. ಸುಮಾರು 2 ಸಾವಿರ ಕೋಟಿ ರೂ. ವೆಚ್ಚ ನಿರೀಕ್ಷಿಸಲಾಗಿದೆ. ಈ ಸಂಖ್ಯೆ 37 ಸಾವಿರ ಮೀರಿದರೆ ಸರಕಾರ ಅದಕ್ಕೆ ಹಣಕಾಸು ನೆರವು ನೀಡಲಿದೆ ಎಂದರು.

ಜಾಗತಿಕ ಶಿಕ್ಷಣದ ಬಗ್ಗೆ ತನ್ನ ಬದ್ಧತೆಯನ್ನು ಮತ್ತಷ್ಟು ಹೆಚ್ಚಿಸುವ ಸಲುವಾಗಿ ರಾಜ್ಯ ಮತ್ತೊಂದು ವಿದ್ಯಾರ್ಥಿವೇತನ ಕಾರ್ಯಕ್ರಮ ಪರಿಚಯಿಸಿದೆ. ಇದು ಹೆಣ್ಣು ಮಕ್ಕಳಿಗೆ ಯುನೈಟೆಡ್ ಕಿಂಗ್‌ಡಮ್‌ನ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡಲು ಅನುವು ಮಾಡಿಕೊಡುತ್ತದೆ. ರಾಜ್ಯವು ಬ್ರಿಟಿಷ್ ಕೌನ್ಸಿಲ್ ಸಹಯೋಗದೊಂದಿಗೆ ಸೌಕಟ್ ಕಾರ್ಯಕ್ರಮ ಪ್ರಾರಂಭಿಸಿದೆ, ವಿದ್ಯಾರ್ಥಿಗಳನ್ನು 15 ದಿನಗಳ ಶೈಕ್ಷಣಿಕ ವಿನಿಮಯಕ್ಕಾಗಿ ಪೂರ್ವ ಲಂಡನ್ ವಿಶ್ವವಿದ್ಯಾಲಯಕ್ಕೆ ಕಳುಹಿಸುತ್ತದೆ. ವಿದ್ಯಾರ್ಥಿಗಳ ಆತ್ಮವಿಶ್ವಾಸ ಮತ್ತು ಜಾಗತಿಕ ಮಾನ್ಯತೆ ಹೆಚ್ಚಿಸುವ ಗುರಿ ಹೊಂದಿದೆ. ಇದು ಸ್ಪರ್ಧಾತ್ಮಕ ಜಗತ್ತಿಗೆ ಅವರನ್ನು ಸಿದ್ಧಪಡಿಸುತ್ತದೆ ಎಂದರು.

*Vijayavani 19-10-2025*

## ಮಂಗಳೂರಿನಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಪ್ರತಿಪಾದನೆ

# ವಿದೇಶಿ ವಿವಿ ಎದುರಿಸಲು ರಾಜ್ಯ ಸಜ್ಜಾಗಬೇಕು

**ವಿಜಯವಾಣಿ** ಸುದ್ದಿಜಾಲ ಮಂಗಳೂರು

ರಾಜ್ಯದಲ್ಲಿ ವಿದೇಶಿ ವಿಶ್ವವಿದ್ಯಾನಿಲಯಗಳು ತಳವೂರುತ್ತಿರುವುದರಿಂದ ಈಗಾಗಲೇ ಅಸ್ತಿತ್ವದಲ್ಲಿರುವ ವಿಶ್ವವಿದ್ಯಾನಿಲಯಗಳಿಗೆ ಸವಾಲಾಗಲಿದೆ. ವಿದೇಶಿ ವಿವಿಗಳ ಸವಾಲು ಎದುರಿಸಲು ನಮ್ಮ ನೆಲದ ವಿವಿಗಳು ಸಜ್ಜಾಗಬೇಕೆಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಕರೆ ನೀಡಿದರು. ನಗರದ ಸಂತ ಅಲೋಶಿಯಸ್ ವಿವಿಯಲ್ಲಿ ಶನಿವಾರ ಕ್ಷೇವಿಯರ್ ಬೋರ್ಡ್ ಆಫ್ ಹೈಯರ್ ಎಜುಕೇಶನ್‌ನ 25ನೇ ತ್ರೈಮಾಸಿಕ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಕರ್ನಾಟಕದಲ್ಲಿ ಲಿವರ್ ಪೂಲ್ ವಿಶ್ವವಿದ್ಯಾಲಯ ಸ್ಥಾಪನೆ ನಿಟ್ಟಿನಲ್ಲಿ ಸರ್ಕಾರದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಕರ್ನಾಟಕದಲ್ಲಿ ವಿದೇಶಿ ವಿವಿಗಳು ಸ್ಥಾಪನೆಯ ನಿಟ್ಟಿನಲ್ಲಿ ಗಮನ ಹರಿಸಿದ್ದು, ಲ್ಯಾಂಕಾಸ್ಟರ್ ವಿವಿ ಕರ್ನಾಟಕದಲ್ಲಿ ತನ್ನ ಕ್ಯಾಂಪಸ್ ಸ್ಥಾಪನೆಗೆ ಮುಂದಾಗಿದೆ. ಲಂಡನ್‌ನ ಇಂಪೀರಿಯಲ್ ಕಾಲೇಜು ತನ್ನ ಸಂಶೋಧನಾ ಕೇಂದ್ರವನ್ನು ತೆರೆದಿದೆ. ಇನ್ನು ಮುಂದೆ ಉನ್ನತ ಶಿಕ್ಷಣ ಪಡೆಯಲು ವಿದೇಶಕ್ಕೆ ಹೋಗಬೇಕಾಗಿಲ್ಲ. ಕಡಿಮೆ ಖರ್ಚಿನಲ್ಲಿ ವಿದೇಶಿ ವಿವಿಯಲ್ಲಿ ದೊರೆಯುವ ಶಿಕ್ಷಣ ರಾಜ್ಯದಲ್ಲೇ ದೊರೆಯಲಿದೆ ಎಂದು ಸಚಿವರು ಹೇಳಿದರು.



ಮಂಗಳೂರಿನ ಸಂತ ಅಲೋಶಿಯಸ್ ವಿವಿಯಲ್ಲಿ ಕ್ಷೇವಿಯರ್ ಬೋರ್ಡ್ ಆಫ್ ಹೈಯರ್ ಎಜುಕೇಶನ್‌ನ 25ನೇ ತ್ರೈಮಾಸಿಕ ಸಮ್ಮೇಳನವನ್ನು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಉದ್ಘಾಟಿಸಿದರು.

**ಆಧುನಿಕ ಪಾಲಿಟೆಕ್ನಿಕ್ ಸ್ಥಾಪನೆ:** ಏಷ್ಯನ್ ಅಭಿವೃದ್ಧಿ ಬ್ಯಾಂಕಿನ ಗಣನೀಯ ಆರ್ಥಿಕ ಬೆಂಬಲದೊಂದಿಗೆ, ಕರ್ನಾಟಕ ಕೌಶಲ ಮತ್ತು ಉದ್ಯೋಗ ಸಿದ್ಧತೆ ಕೇಂದ್ರೀಕರಿಸುವ ಮಾದರಿ ಕಾಲೇಜುಗಳು, ಆಧುನಿಕ ಪಾಲಿಟೆಕ್ನಿಕ್ ಸ್ಥಾಪಿಸಲು ಚಿಂತನೆ ನಡೆಸಿದೆ. ಮಹಿಳಾ ಸಬಲೀಕರಣದ ಮಹತ್ವದ ಹೆಜ್ಜೆಯಾಗಿ ವಿದ್ಯಾರ್ಥಿನಿಯರಿಗೆ ಸಾರ್ವತ್ರಿಕ ವಿದ್ಯಾರ್ಥಿವೇತನ ಕಾರ್ಯಕ್ರಮ ಪ್ರಾರಂಭಿಸಲು ಅಜೀಂ ಪ್ರೇಮ್‌ಜಿ ಫೌಂಡೇಶನ್‌ನೊಂದಿಗೆ ಪಾಲುದಾರಿಕೆ ಹೊಂದಿದೆ.

ಈ ಉಪಕ್ರಮ ಉನ್ನತ ಶಿಕ್ಷಣ ಪಡೆಯುತ್ತಿರುವ 37 ಸಾವಿರ ವಿದ್ಯಾರ್ಥಿನಿಯರಿಗೆ ಪ್ರಯೋಜನವಾಗಲಿದೆ ಎಂದರು. ಕೇಂದ್ರ ಶಿಕ್ಷಣ ಸಚಿವಾಲಯದ ಜಂಟಿ ಕಾರ್ಯದರ್ಶಿ ಆರ್ಮ್‌ಸ್ಟ್ರಾಂಗ್ ಪಾಮೇ ಮುಖ್ಯ ಅತಿಥಿಯಾಗಿದ್ದರು. ನಾಗ್ಪುರದ ಆರ್ಚ್ ಬಿಷಪ್ ಹಾಗೂ ಸಿಬಿಸಿಐ ಶಿಕ್ಷಣ ಮತ್ತು ಸಂಸ್ಕೃತಿ ಆಯೋಗದ ಅಧ್ಯಕ್ಷ ಫಾ.ಡಾ. ಎಲಿಯಾಸ್ ಗೋನ್ಸಾಲ್ವಿಸ್ ಬಲಿಪೂಜೆ ನೆರವೇರಿಸಿದರು.

*Udayavani 19-10-2025*

# ವಿದೇಶಿ ವಿವಿಗಳೊಂದಿಗೆ ಸ್ಪರ್ಧೆಯ ಸವಾಲು

## ಅಲೋಶಿಯಸ್ ಕಾಲೇಜಿನಲ್ಲಿ ಸಚಿವ ಡಾ| ಸುಧಾಕರ್




**ಸಂತ ಆಲೋಶಿಯಸ್ ವಿವಿಯಲ್ಲಿ ಸಮ್ಮೇಳನ ಉದ್ಘಾಟಿಸಲಾಯಿತು.**

ಮಂಗಳೂರು, ಅ.18: ರಾಜ್ಯದಲ್ಲಿರುವ ಖಾಸಗಿ ವಿಶ್ವವಿದ್ಯಾನಿಲಯಗಳು ವಿದೇಶಿ ವಿ.ವಿ.ಗಳೊಂದಿಗೆ ಸ್ಪರ್ಧೆಯ ಸವಾಲುಗಳನ್ನು ಎದುರಿಸಲು ಸಿದ್ದವಾಗುವ ಅಗತ್ಯವಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ| ಎಂ.ಸಿ. ಸುಧಾಕರ್ ಹೇಳಿದ್ದಾರೆ.

ಸಂತ ಅಲೋಶಿಯಸ್ ವಿ.ವಿ.ಯಲ್ಲಿ ಶನಿವಾರ ಭಾರತದಲ್ಲಿ ಕ್ಸೇವಿಯರ್ ಉನ್ನತ ಶಿಕ್ಷಣ ಮಂಡಳಿಯ 25ನೇ ತ್ರೈವಾರ್ಷಿಕ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದೇಶಿ ವಿವಿಗಳು ಖಾಸಗಿ ವಿ.ವಿ.ಗಳಲ್ಲಿರುವಪದವಿಗಳನ್ನುನೀಡುವ ಮೂಲಕ ಸ್ಪರ್ಧೆ ನೀಡುತ್ತಿವೆ. ಖಾಸಗಿ ವಿ.ವಿ.ಗಳು ಸಹ ಅದೇ ಪಠ್ಯಕ್ರಮವನ್ನು ತರುವ ಮೂಲಕ ಅಥವಾ ಇಲ್ಲಿ ಅದೇ ಶಿಕ್ಷಣದ ಗುಣಮಟ್ಟವನ್ನು ತೋರಿಸುವ ಸವಾಲು ಇದೆ. ರಾಜ್ಯದಲ್ಲಿ ಲ್ಯಾಂಕಾಸ್ಟರ್ ತನ್ನ ಕ್ಯಾಂಪಸ್‌ವನ್ನು ಸ್ಥಾಪಿಸುತ್ತಿರುವ ಎರಡನೇ ವಿದೇಶಿ ವಿಶ್ವವಿದ್ಯಾಲಯವಾಗಿದೆ. ಯುಕೆಯ ಲಿವರ್‌ಪೂಲ್ ವಿಶ್ವವಿದ್ಯಾಲಯವು ಈಗಾಗಲೇ ಕರ್ನಾಟಕ ಸರಕಾರದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಹೆಚ್ಚುವರಿಯಾಗಿ ಲಂಡನ್‌ನ ಇಂಪೀರಿಯಲ್ ಕಾಲೇಜು ತನ್ನ ಸಂಶೋಧನಾ ಕೇಂದ್ರವನ್ನು ತೆರೆದಿದೆ. ಇನ್ನಷ್ಟು ವಿಶ್ವವಿದ್ಯಾನಿಲಯಗಳು ಆಸಕ್ತಿ ತೋರಿಸಿವೆ ಎಂದು ಸಚಿವರು ಹೇಳಿದರು.

### 37,000 ಬಾಲಕಿಯರಿಗೆ ವಿದ್ಯಾರ್ಥಿವೇತನ

ರಾಜ್ಯ ಸರಕಾರವು ಸಾರ್ವತ್ರಿಕ ವಿದ್ಯಾರ್ಥಿವೇತನ ಕಾರ್ಯಕ್ರಮವನ್ನು ಪ್ರಾರಂಭಿಸಲು ಅಜೀಂ ಪ್ರೇಮ್‌ಜಿ ಫೌಂಡೇಶನ್‌ನೊಂದಿಗೆ ಪಾಲುದಾರಿಕೆ ಹೊಂದಿದೆ. ಉನ್ನತ ಶಿಕ್ಷಣವನ್ನು ಪಡೆಯುತ್ತಿರುವ ಸುಮಾರು 37,000 ಬಾಲಕಿಯರಿಗೆ ಆರ್ಥಿಕ ನೆರವು ನೀಡುತ್ತದೆ. ಉನ್ನತ ಶಿಕ್ಷಣದಲ್ಲಿ ಕೌಶಲ್ಯ, ಉದ್ಯೋಗಾವಕಾಶ ಹೆಚ್ಚಳಕ್ಕೆ ಆದ್ಯತೆ ನೀಡಲಾಗುತ್ತಿದೆ ಎಂದು ಹೇಳಿದರು.

### ಎಡಿಬಿಯಿಂದ 2,500 ಕೋ.ರೂ. ನೆರವು

ಎಡಿಬಿಯಿಂದ 2,500 ಕೋ. ರೂ. ನೆರವಿನೊಂದಿಗೆ ಉದ್ಯೋಗ ಸಿದ್ಧತೆಯ ಮೇಲೆ ಕೇಂದ್ರೀಕರಿಸುವ 40 ಪ್ರಥಮ ದರ್ಜೆಯ ಕಾಲೇಜುಗಳು, 10 ಪಾಲಿಟೆಕ್ನಿಕ್ ಗಳು ಮತ್ತು10 ಸೆಂಟರ್‌ಆಫ್ ಎಕ್ಸಲೆನ್ಸ್ ಸಂಸ್ಥೆಗಳನ್ನು ಆರಂಭಿಸಲಾಗುವುದು ಎಂದರು.

ಕೇಂದ್ರ ಸರಕಾರದ ಶಿಕ್ಷಣ ಸಚಿವಾಲಯದ ಸಂಯುಕ್ತ ಕಾರ್ಯದರ್ಶಿ ಆರ್ಮ್ ಸ್ಟ್ರಾಂಗ್ ಪಾಮೇ ಪಾಲ್ಗೊಂಡಿದ್ದರು. ನಾಗಪುರದ ಆರ್ಚ್ ಬಿಷಪ್ ಹಾಗೂ ಸಿಬಿಸಿಐ ಶಿಕ್ಷಣ ಮತ್ತು ಸಂಸ್ಕೃತಿ ಆಯೋಗದ ಅಧ್ಯಕ್ಷ ರೈ| ರೆ|ಡಾ| ಎಲಿಯಾಸ್ ಗೋನ್ಸಾಲ್ವಿಸ್, ಡಾ| ವಿಲಿಯಂ ಬ್ರಾಂಟನ್ ಫೀಸ್ಟರ್, ಡಾ| ಅನಿಲ್ ಥಾಮಸ್, ಡಾ| ಸಿಂಥಿಯಾ ಮಿನೇಜಸ್, ಸಂತ ಅಲೋಶಿಯಸ್ ವಿವಿಯ ಕುಲಪತಿ ವಂ| ಡಾ| ಪ್ರವೀಣ್ ಮಾರ್ಟಿಸ್, ಕ್ಸೇವಿಯರ್ ಬೋರ್ಡ್ ಆಫ್ ಹೈಯರ್ ಎಜುಕೇಶನ್ ಅಧ್ಯಕ್ಷ ರೆ|ಡಾ| ಜೋಜಿ ರೆಡ್ಡಿ ಕಾರ್ಯದರ್ಶಿ ಭ.ಡಾ| ದೀಪ್ತಿ,ಉಪಾಧ್ಯಕ್ಷ ರೆ|ಫಾ| ಗಿಲ್ಬರ್ಟ್ ಮಸ್ಕರೇನಸ್ ಮೊದಲಾದವರು ಉಪಸ್ಥಿತರಿದ್ದರು.

*Prajavani 19-10-2025*

# ಉನ್ನತ ಶಿಕ್ಷಣಕ್ಕೆ ಎಡಿಬಿ ₹ 2500 ಕೋಟಿ ನೆರವು

## ಕ್ಸೇವಿಯರ್ ಮಂಡಳಿಯ ತ್ರೈ ವಾರ್ಷಿಕ ಸಮ್ಮೇಳನ ಉದ್ಘಾಟಿಸಿದ ಸಚಿವ

ಪ್ರಜಾವಾಣಿ ವಾರ್ತೆ

ಮಂಗಳೂರು: ತಾಂತ್ರಿಕ ಹಾಗೂ ಉನ್ನತ ಶಿಕ್ಷಣವನ್ನು ಮೇಲ್ದರ್ಜೆಗೇರಿಸಲು ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಸರ್ಕಾರಕ್ಕೆ ₹ 2500 ಕೋಟಿ ನೆರವು ನೀಡಲಿದೆ. 40 ಪ್ರಥಮ ದರ್ಜೆ ಕಾಲೇಜು, 10 ಪಾಲಿಟೆಕ್ನಿಕ್ ಮೇಲ್ದರ್ಜೆಗೇರಿಸಲು ಹಾಗೂ 9 ಉತ್ಕೃಷ್ಟತಾ ಕೇಂದ್ರ (ಸೆಂಟರ್ ಆಫ್ ಎಕ್ಸಲೆನ್ಸ್) ಗಳನ್ನು 4 ವರ್ಷಗಳಲ್ಲಿ ಸ್ಥಾಪಿಸಲು ನೆರವಾಗಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು.

ಇಲ್ಲಿನ ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯ ಹಾಗೂ ಕ್ಸೇವಿಯರ್ ಉನ್ನತ ಶಿಕ್ಷಣ ಮಂಡಳಿಯ ಆಶ್ರಯದಲ್ಲಿ ಏರ್ಪಡಿಸಿದ್ದ ಮಂಡಳಿಯ 25ನೇ ತ್ರೈ ವಾರ್ಷಿಕ ಸಮ್ಮೇಳನವನ್ನು ಉದ್ಘಾಟಿಸಿ ಅವರು ಶನಿವಾರ ಮಾತನಾಡಿದರು.

'ಉನ್ನತ ಶಿಕ್ಷಣದಲ್ಲಿ ಕೌಶಲ ಅಭಿವೃದ್ಧಿಗೆ ಆದ್ಯತೆ ನೀಡಲಿದ್ದೇವೆ. ಪ್ರತಿಯೊಂದು ಕೋರ್ಸ್ ಕೂಡಾ ಉದ್ಯೋಗಾವಕಾಶಕ್ಕೆ ಪೂರಕವಾಗಿರುವುದನ್ನು ಖಾತರಿಪಡಿಸಲಿದ್ದೇವೆ. ಈ ಸಲುವಾಗಿ ಉನ್ನತ ಶಿಕ್ಷಣ ಸಂಸ್ಥೆಗಳು ಕ್ರಿಯಾತ್ಮಕ ಪಠ್ಯಕ್ರಮ ಹಾಗೂ ಉತ್ತಮ ಸೌಕರ್ಯಗಳನ್ನು ಅಳವಡಿಸಿಕೊಳ್ಳಲಿವೆ. ವಿದ್ಯಾರ್ಥಿಗಳು ಸಂವಹನ ಕೌಶಲ, ಸಮಸ್ಯೆ ಬಗೆಹರಿಸುವಿಕೆ ಮತ್ತು ವಿಮರ್ಶಾತ್ಮಕ ದೃಷ್ಟಿಕೋನ ಬೆಳೆಸಿಕೊಳ್ಳಲು ಹಾಗೂ ಅವರ ಸಾಮರ್ಥ್ಯವೃದ್ಧಿಗೆ ಇದು ನೆರವಾಗಲಿದೆ' ಎಂದರು.

**ಮುಖ್ಯಾಂಶಗಳು**

- ಉನ್ನತ ಶಿಕ್ಷಣಕ್ಕೆ ಕ್ರಿಯಾತ್ಮಕ ಪಠ್ಯಕ್ರಮ, ಉತ್ತಮ ಸೌಕರ್ಯ
- 40 ಪ್ರಥಮ ದರ್ಜೆ ಕಾಲೇಜು, 10 ಪಾಲಿಟೆಕ್ನಿಕ್ ಮೇಲ್ದರ್ಜೆಗೆ
- 4 ವರ್ಷಗಳಲ್ಲಿ 9 ಉತ್ಕೃಷ್ಟತಾ ಕೇಂದ್ರ ಸ್ಥಾಪನೆ

ಕೇಂದ್ರ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಜಂಟಿ ಕಾರ್ಯದರ್ಶಿ ಆರ್ಮ್‌ಸ್ಟ್ರಾಂಗ್ ಪಾಮ್, 'ಕೇಂದ್ರ ಸರ್ಕಾರವು ಉನ್ನತ ಶಿಕ್ಷಣದ ಸುಧಾರಣೆಗಾಗಿ ರಾಷ್ಟ್ರೀಯ ಉನ್ನತ ಶಿಕ್ಷಣ ಅಭಿಯಾನ (ರೂಸ) ಅಡಿ ವಿವಿಧ ಯೋಜನೆಗಳನ್ನು ರೂಪಿಸಿದೆ. ಇದರಲ್ಲಿ ಲಭ್ಯ ಇರುವ ಅನುದಾನವನ್ನು ಶಿಕ್ಷಣ ಸಂಸ್ಥೆಗಳು ಬಳಸಿಕೊಳ್ಳಬೇಕು. ಈ ವರ್ಷದ ಬಜೆಟ್‌ನಲ್ಲಿ ಒದಗಿಸಿದ ಅನುದಾನದಲ್ಲಿ ₹ 250 ಕೋಟಿಗಳಷ್ಟು ಮೊತ್ತ ಈಗಲೂ ಲಭ್ಯ ಇದೆ' ಎಂದರು.



ಕ್ಸೇವಿಯರ್ ಮಂಡಳಿಯ 2025ನೇ ಸಾಲಿನ ಸ್ಮರಣ ಸಂಚಿಕೆಯನ್ನು ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು. ಬೈಜು ಆಂಟೊನಿ, ವಿಲಿಯಂ ಬ್ಲಾಂಟನ್ ಫೀಸ್ಟರ್, ಫಾ.ಪ್ರವೀಣ್ ಮಾರ್ಟಿಸ್, ಆರ್ಮ್‌ಸ್ಟ್ರಾಂಗ್ ಪಾಮ್, ಜೋಜಿ ರೆಡ್ಡಿ, ಎಲಿಯಾಸ್ ಗೋನ್ಸಾಲ್ವೆಸ್, ಡಾ.ಎಂ.ಸಿ.ಸುಧಾಕರ್, ಸಿಂಥಿಯಾ ಮೆನೆಜಸ್, ಅನಿಲ್ ಥಾಮಸ್, ಗಿಲ್ಬರ್ಟ್ ಮಸ್ಕರೇನ್ಹಸ್ ಹಾಗೂ ದೀಪ್ತಿ ಭಾಗವಹಿಸಿದ್ದರು

**'ವಿದೇಶಿ ವಿವಿಗಳಿಂದ ಶಿಕ್ಷಣದಲ್ಲಿ ಪರಿವರ್ತನೆ'**

'ವಿದೇಶಿ ವಿಶ್ವವಿದ್ಯಾಲಯಗಳು ರಾಜ್ಯದಲ್ಲೂ ತಮ್ಮ ಕೇಂದ್ರಗಳನ್ನು ಆರಂಭಿಸುವುದರಿಂದ ರಾಜ್ಯದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರ ಪರಿವರ್ತನೆಗಳಾಗಲಿವೆ. ಇಲ್ಲಿನ ಖಾಸಗಿ ವಿಶ್ವವಿದ್ಯಾಲಯಗಳೂ ಜಾಗತಿಕ ದರ್ಜೆಯ ಕೋರ್ಸ್‌ಗಳನ್ನು ಪರಿಚಯಿಸಬೇಕಾಗುತ್ತದೆ. ಪಠ್ಯಕ್ರಮ, ಕಲಿಕಾ ಕ್ರಮಗಳ ಸುಧಾರಣೆ ಮೂಲಕ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಇದರಿಂದ ಇಲ್ಲಿನ ವಿದ್ಯಾರ್ಥಿಗಳಿಗೆ ಅನುಕೂಲ ಆಗಲಿದೆ' ಎಂದು ಡಾ.ಎಂ.ಸಿ.ಸುಧಾಕರ್ ಹೇಳಿದರು.

'ರಾಜ್ಯದಲ್ಲಿ ಲಂಕಾಸ್ಟರ್ ವಿಶ್ವವಿದ್ಯಾಲಯವು ರಾಜ್ಯದಲ್ಲಿ ಮುಂದಿನ ವರ್ಷ ಕಾರ್ಯಾರಂಭ ಮಾಡಲಿದೆ. ಲಿವರ್‌ಪೂಲ್ ವಿಶ್ವವಿದ್ಯಾಲಯ ಈಗಾಗಲೇ ಸರ್ಕಾರದ ಜೊತೆ ಒಪ್ಪಂದ ಮಾಡಿಕೊಂಡಿದೆ. ಲಂಡನ್‌ನ ಇಂಪೀರಿಯಲ್ ಕಾಲೇಜು ಇಲ್ಲಿ ಸಂಶೋಧನಾ ಕೇಂದ್ರವನ್ನು ಆರಂಭಿಸಿದೆ. ಇನ್ನಷ್ಟು ವಿದೇಶಿ ವಿಶ್ವವಿದ್ಯಾಲಯಗಳು ರಾಜ್ಯದಲ್ಲಿ ತಮ್ಮ ಸಂಸ್ಥೆಗಳನ್ನು ಆರಂಭಿಸಲಿವೆ' ಎಂದರು.

ಕ್ಸೇವಿಯರ್ ಮಂಡಳಿಯ ಅಧ್ಯಕ್ಷ ಜೋಜಿ ರೆಡ್ಡಿ ಅಧ್ಯಕ್ಷತೆ ವಹಿಸಿದ್ದರು. ನಾಗಪುರದ ಆರ್ಚ್ ಬಿಷಪ್ ರೆ.ಎಲಿಯಾಸ್ ಗೋನ್ಸಾಲ್ವೆಸ್ ಶುಭಸಂದೇಶ ನೀಡಿದರು. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಸಿಂಥಿಯಾ ಮೆನೆಜಸ್ ದಿಕ್ಸೂಚಿ ಭಾಷಣ ಮಾಡಿದರು.

ಅಮೆರಿಕದ ಡಲ್ಲಾಸ್ ಬ್ಯಾಪ್ಟಿಸ್ಟ್ ವಿಶ್ವವಿದ್ಯಾಲಯದ ವಿಲಿಯಂ ಬ್ಲಾಂಟನ್ ಫೀಸ್ಟರ್, ಎಐಸಿಯು ಅಲ್ಪಸಂಖ್ಯಾತರ ವಿಭಾಗದ ಉಪಾಧ್ಯಕ್ಷ ಅನಿಲ್ ಥಾಮಸ್, ಕ್ಸೇವಿಯರ್ ಮಂಡಳಿಯ ಪ್ರಧಾನ ಕಾರ್ಯದರ್ಶಿ ಭಗಿನಿ ದೀಪ್ತಿ, ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಕುಲಪತಿ ಫಾ.ಪ್ರವೀಣ್ ಮಾರ್ಟಿಸ್ ಭಾಗವಹಿಸಿದ್ದರು. ಕ್ಸೇವಿಯರ್ ಮಂಡಳಿಯ ಕರ್ನಾಟಕ ಘಟಕದ ಪ್ರಾದೇಶಿಕ ಅಧ್ಯಕ್ಷ ಫಾ.ಬೈಜು ಆಂಟೊನಿ ಸ್ವಾಗತಿಸಿದರು. ಮಂಡಳಿಯ ಉಪಾಧ್ಯಕ್ಷ ಫಾ.ಗಿಲ್ಬರ್ಟ್ ಮಸ್ಕರೇನ್ಹಸ್ ಧನ್ಯವಾದ ಸಲ್ಲಿಸಿದರು.



ESTD : 1880

*Deccan Herald 19-10-2025*

# Govt to get Rs 2,500 cr from ADB to upgrade higher education institutes

## '40 first grade colleges, 10 polytechnics to be set up'

MANGALURU, DHNS

Minister for Higher Education Dr M C Sudhakar said that the government will receive a financial assistance of Rs 2,500 crore from the Asian Development Bank (ADB) to upgrade technical and higher education institutions in the state.

"With this funding, we will establish 40 first-grade colleges and 10 polytechnics as model institutions. In addition, nine Centres of Excellence will be set up within the next four years," he said.

He was speaking at the 25th Triennial Conference 2025 of the Xavier Board of Higher Education in India on 'Empowering Minds, Embracing Change: Reimagining Higher Education for a Global Tomorrow', organised at St Aloysius (Deemed-to-be University).

Dr Sudhakar said greater emphasis would be laid on skill development and ensuring that every course is engaging and employment-oriented.

"A dynamic curriculum with better facilities will be introduced, focusing on aptitude, communication skills, problem-solving, and critical thinking among students. The ADB team is working closely with the state government, and we are open to the suggestions they provide," he added.

The minister emphasised that the true success of education lies in nurturing students to become compassionate citizens.

He also stressed the need to uphold the secular fabric of the country and adopt innovative models that enable India to emerge as a leader in higher education.

"Empowering minds is a crucial aspect of higher education. We live in an era of rapid technological advancement. To truly empower minds, we must go beyond imparting knowledge — we must instil courage and critical thinking, enabling students not only to adapt to the world as it is, but also to imagine and build the world as it should be. Education liberates the mind from fear," he said.

"For the higher education of the future, we must focus on three key pillars — relevance, innovation, and global responsibility," he added. Dr Sudhakar said the government is focusing on skill-based and experiential learning.



Minister for Higher Education Dr M C Sudhakar inaugurates the 25th Triennial Conference 2025 of the Xavier Board of Higher Education in India at the St Aloysius Deemed-to-be University in Mangaluru.

On the entry of foreign universities into Karnataka, he said their presence would push private universities in the state to compete by offering world-class degrees domestically, thereby reducing the need for students to go abroad.

"This development will encourage our private universities to match international curricula, pedagogy, and standards of education. This is a big change we look forward to in Karnataka," he noted.

He said Lancaster University would become the second foreign university to establish a campus in Karnataka next year. The University of Liverpool has already signed an agreement with the state government, while Imperial College London has opened its research centre, with more institutions in the pipeline, he said.

To empower female students, the state government has partnered with the Azim Premji Foundation to launch a scholarship programme providing financial support to around 37,000 girls pursuing higher education, with plans to expand if the numbers exceed expectations, he added.

"We have also launched the Chevening-Karnataka Scholarship to help students pursue master's degrees in the UK. Additionally, the Karnataka State Higher Education Council (KSHEC) and the British Council have introduced the Scholars for Outstanding Undergraduate Talent (SCOUT) programme, which provides talented students from state institutions with international exposure, focusing on themes such as Sustainable Development Goals, critical thinking, and entrepreneurship," he said.

*The Hindu 19-10-2025*

# Govt. to get ₹2,500 cr. from ADB to revamp higher education



Students of St. Aloysius College performing Bharatanatyam as part of the inauguration ceremony of XXV Triennial Conference 2025 in Mangaluru on Saturday. H.S. MANJUNATH

**The Hindu Bureau**
MANGALURU 19/10/25

Minister for Higher Education M.C. Sudhakar said here on Saturday that the State government will get ₹2,500 crore financial support from the Asian Development Bank (ADB) to revamp its higher education institutes.

The government is planning to use the fund to upgrade its 40 first grade colleges as model colleges and 10 polytechnics as model polytechnics. In addition, the fund will be utilised to open nine centres of excellence for a period of four years, he said.

Dr. Sudhakar was speaking after inaugurating the four-day XXV Triennial Conference 2025 of the Xavier Board of Higher Education on the theme 'Empowering Minds, Embracing Change: Reimagining Higher Education for a Global Tomorrow' at St. Aloysius (deemed to be university) in Mangaluru.

He said that the government is deliberating upon how to use the ADB fund to make each course more interesting and job ready, how to make the curriculum more dynamic, how to enhance the critical thinking, confidence level and communication skills of students and how to upgrade the infrastructure of higher education institutes.

He said that the presence of foreign universities in Bengaluru will make students of the State get their education at a lesser cost by avoiding travelling abroad. It will also make private universities of the country competent and improve their standards or offer education at the equivalent level of foreign universities.

Education empowers not only individuals but communities. It over comes inequality and fear, Dr. Sudhakar said.

*Vijayavani 22-10-2025*

# ಕ್ಸೇವಿಯರ್ ಬೋರ್ಡ್ ತ್ರೈವಾರ್ಷಿಕ ಸಮ್ಮೇಳನ ಸಮಾರೋಪ

**ಮಂಗಳೂರು:** ನಗರದ ಸಂತ ಅಲೋಸಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ನಡೆದ ಕ್ಸೇವಿಯರ್ ಬೋರ್ಡ್ 25ನೇ ತ್ರೈವಾರ್ಷಿಕ ಸಮ್ಮೇಳನ ನಾಯಕತ್ವ, ಸೇವೆ ಮತ್ತು ಪರಿವರ್ತನೆ ಎಂಬ ಸಂದೇಶದೊಂದಿಗೆ ಸಮಾರೋಪಗೊಂಡಿತು. ಪ್ರೊ.ಫಾ.ಎಲ್.ಜೋಜಿ ರೆಡ್ಡಿ ಎಸ್.ಜೆ., ಫಾ.ಗಿಲ್ಬರ್ಟ್ ಮಸ್ಕರೇನಸ್ ಎಸ್‌ಎಸಿ ಮತ್ತು ಡಾ.ಫಾ.ಬೈಜು ಆಂಟೋನಿ ಸಿಎಂ ನೇತೃತ್ವದಲ್ಲಿ ಪವಿತ್ರ ಬಲಿಪೂಜೆಯೊಂದಿಗೆ ಆರಂಭವಾಯಿತು. ಮೂರು ದಿನಗಳ ಚರ್ಚೆ, ಸಂವಾದ ನಡೆಯಿತು.

ಮಂಗಳೂರಿನ ಸಂತ ಆಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಎಸ್‌ಜೆ ಅವರನ್ನು ಏಕಮತದಿಂದ ಕ್ಸೇವಿಯರ್ ಬೋರ್ಡ್ ಆಫ್ ಹೈಯರ್ ಎಜ್ಯುಕೇಶನ್ ಅಧ್ಯಕ್ಷರಾಗಿ ಮತ್ತು ರಾಜಸ್ಥಾನದ ಅಜ್ಮೀರ್‌ನ ಸೋಫಿಯಾ ಕಾಲೇಜಿನ ಪ್ರಾಂಶುಪಾಲ ಡಾ.ಸಿಸ್ಟರ್ ಪರ್ಲ್ ಡಿಸೋಜ ಅವರನ್ನು ಉಪಾಧ್ಯಕ್ಷೆಯಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣೆ ಅಧಿಕಾರಿ ಫಾ.ಮಾರ್ಟಿನ್ ಘೋಷಿಸಿದರು.




ಕ್ಸೇವಿಯರ್ ಬೋರ್ಡ್ ಸಮ್ಮೇಳನ ಸಂಪನ್ನಗೊಂಡಿತು. ಪ್ರೊ.ಫಾ.ಎಲ್.ಜೋಜಿ ರೆಡ್ಡಿ ಎಸ್.ಜೆ., ಫಾ.ಗಿಲ್ಬರ್ಟ್ ಮಸ್ಕರೇನಸ್ ಎಸ್‌ಎಸಿ, ಡಾ.ಫಾ.ಬೈಜು ಆಂಟೋನಿ ಸಿಎಂ ಮತ್ತಿತರರು ಇದ್ದರು.

ಚುನಾವಣೆಯ ನಂತರ ಹೊಸ ಪದಾಧಿಕಾರಿಗಳು ಮತ್ತು ಮಂಡಳಿ ಸದಸ್ಯರ ಮೊದಲ ಸಭೆ ನಡೆಯಿತು. ಬಳಿಕ ಪ್ರತಿನಿಧಿಗಳು ಪ್ರಮುಖ ನಾಲ್ಕು ವಿಷಯಗಳಾದ ತಂತ್ರಜ್ಞಾನ ನಾಗರಿಕತೆ ಮತ್ತು ಸಾಮಾಜಿಕ ಪರಿವರ್ತನೆ, ಭವಿಷ್ಯಕ್ಕೆ ಸಿದ್ಧತೆಯುಳ್ಳ ಪ್ರತಿಭೆ ಅಭಿವೃದ್ಧಿ-ಉದ್ಯೋಗಾರ್ಹತೆ ಮತ್ತು ಕೈಗಾರಿಕೆ-ಶಿಕ್ಷಣ ಕ್ಷೇತ್ರದ ಸಹಕಾರದ ಬಗ್ಗೆ, ಶಿಕ್ಷಕರ ತರಬೇತಿಯಲ್ಲಿ ಪರಿವರ್ತನೆ-ಭಾರತೀಯ ಸಂಸ್ಕೃತಿ ಮತ್ತು ನವೋತ್ಪಾದನೆಯೊಂದಿಗೆ ಶಿಕ್ಷಕರ ತರಬೇತಿ. ಭಾರತೀಯ ನರ್ಸಿಂಗ್ ಶಿಕ್ಷಣದ ನಡುವೆ ಅಂತರ ಭರ್ತಿ-ನೀತಿ ಸುಧಾರಣೆ, ಗುಣಮಟ್ಟ ಮತ್ತು ಸಮಾನತೆ ಬಗ್ಗೆ ಸಂವಾದ ನಡೆಸಿದರು.

ಕ್ಸೇವಿಯರ್ ಬೋರ್ಡ್ ನ್ಯಾಷನಲ್ ಎಕ್ಸಲೆನ್ಸ್ ಅವಾರ್ಡ್ ಅನ್ನು ಶೈಕ್ಷಣಿಕ, ನಾಯಕತ್ವ ಹಾಗೂ ಸೇವಾ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ ಸಂಸ್ಥೆಗಳಿಗೆ ಪ್ರದಾನ ಮಾಡಲಾಯಿತು. ಕ್ಸೇವಿಯರ್ ಬೋರ್ಡ್‌ನ ಪ್ರಧಾನ ಕಾರ್ಯದರ್ಶಿ ಡಾ.ಸಿಸ್ಟರ್ ದೀಪ್ತಿ ವಂದಿಸಿದರು.

*Times of India 24-10-2025*

# Fr Praveen Martis elected as president of Xavier Board

TIMES NEWS NETWORK

**Mangaluru:** Fr Praveen Martis **(in pic)**, vice-chancellor of St Aloysius (DU), was elected as the president of the Xavier Board of Higher Education. This announcement was made during the concluding day of the 25th Xavier Board Triennial Conference 2025.

The conference concluded on Monday, during which, the election for the new office bearers of Xavier Board of Higher Education took place.

The election officer, Rev Fr Martin, announced the results,



with Fr Praveen Martis being unanimously elected as president and Sr Pearl D'Souza, principal of Sophia College, Ajmer, Rajasthan, as the vice president. Soon after, the first meeting of the newly elected office bearers and board members was convened.

*The Hindu 24-10-2025*

# Praveen Martis elected as president of Xavier Board

**The Hindu Bureau**
MANGALURU

Praveen Martis, Vice-Chancellor of St. Aloysius (deemed to be university), Mangaluru, has been elected as the president of Xavier Board of Higher Education during the board's 25th triennial conference held recently at St Aloysius.

According to a press release, Principal, Sophia College, Ajmer, Rajasthan, Pearl D'Souza was elected as the vice-president.

The newly elected office-bearers and board members had their first meeting. Members of eight regions met regional office-bearers.



Praveen Martis
SPECIAL ARRANGEMENT



Pearl D'Souza
SPECIAL ARRANGEMENT

During the four days of the conference, there were sessions on topics namely digital citizenship and social alchemy; fostering future-ready talent; transforming teacher education for holistic and future-ready educators, and bridging the gap in Indian nursing eucation.

Presenters and moderators from premier institutions showcased best practices and successful models of institutional innovation, the release stated.

*Vijayakarnataka 26-10-2025*

# ಕ್ಸೇವಿಯರ್ ಉನ್ನತ ಶಿಕ್ಷಣ ಮಂಡಳಿ ನೂತನ ಅಧ್ಯಕ್ಷರಾಗಿ ಡಾ.ಪ್ರವೀಣ್ ಮಾರ್ಟಿಸ್ ಆಯ್ಕೆ

**ಮಂಗಳೂರು:** ಮಂಗಳೂರಿನ ಸಂತ ಅಲೋಶಿಯಸ್ ಪರಿಗಣಿತ ವಿವಿಯಲ್ಲಿ ಇತ್ತೀಚೆಗೆ ನಡೆದ ಕ್ಸೇವಿಯರ್ ಉನ್ನತ ಶಿಕ್ಷಣ ಮಂಡಳಿಯ 25ನೇ ತ್ರೈವಾರ್ಷಿಕ ಸಭೆ ಬಳಿಕ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು. ಅಧ್ಯಕ್ಷರಾಗಿ ಸಂತ ಅಲೋಶಿಯಸ್ ಪರಿಗಣಿತ ವಿವಿಯ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಎಸ್.ಜೆ. ಹಾಗೂ ಉಪಾಧ್ಯಕ್ಷರಾಗಿ ರಾಜಸ್ಥಾನದ ಅಜ್ಮೀರ್ ಸೋಫಿಯಾ ಕಾಲೇಜಿನ ಪ್ರಿನ್ಸಿಪಾಲ್ ಡಾ.ಸೀನಿಯರ್ ಪರ್ಲ್ ಡಿಸೋಜ ಸರ್ವಾನುಮತದಿಂದ ಆಯ್ಕೆಯಾದರು.

ತ್ರೈವಾರ್ಷಿಕ ಸಭೆಯಲ್ಲಿ ಚರ್ಚೆ: ಕ್ಸೇವಿಯರ್ ಉನ್ನತ ಶಿಕ್ಷಣ ಮಂಡಳಿಯ 25ನೇ ತ್ರೈವಾರ್ಷಿಕ ಸಭೆಯಲ್ಲಿ ಪ್ರಮುಖ ವಿಚಾರಗಳ ಮೇಲೆ ಚರ್ಚೆ ನಡೆಯಿತು. ಡಿಜಿಟಲ್ ಪೌರತ್ವ ಮತ್ತು ಸಾಮಾಜಿಕ ರಸವಿದ್ಯೆ, ಭವಿಷ್ಯಕ್ಕೆ ಸಿದ್ಧವಾಗಿರುವ ಪ್ರತಿಭೆ ಬೆಳೆಸುವುದು, ಸಮಗ್ರ ಮತ್ತು ಭವಿಷ್ಯಕ್ಕೆ ಸಿದ್ಧವಾಗಿರುವ ಶಿಕ್ಷಕರಿಗಾಗಿ ಶಿಕ್ಷಕರ ಶಿಕ್ಷಣವನ್ನು ಪರಿವರ್ತಿಸುವುದು, ಭಾರತೀಯ ನರ್ಸಿಂಗ್ ಶಿಕ್ಷಣದಲ್ಲಿನ ಅಂತರವನ್ನು ನಿವಾರಿಸುವುದು ಮತ್ತಿತರ ಪ್ರಮುಖ ವಿಚಾರಗಳನ್ನು ಒಳಗೊಂಡಿತ್ತು.

ಸಮಾರೋಪದಲ್ಲಿ ಫಾ.ಎಲ್. ಜೋಜಿ ರೆಡ್ಡಿ ಎಸ್.ಜೆ. ಅಧ್ಯಕ್ಷೀಯ ಭಾಷಣ ಮಾಡಿದರು. ಶೈಕ್ಷಣಿಕ, ನಾಯಕತ್ವ ಮತ್ತು ಸೇವೆಯಲ್ಲಿ ಶ್ರೇಷ್ಠತೆಗೆ ನೀಡಿದ ಕೊಡುಗೆಗಳಿಗಾಗಿ ಅತ್ಯುತ್ತಮ ಸಂಸ್ಥೆಗಳಿಗೆ ಕ್ಸೇವಿಯರ್ ಬೋರ್ಡ್ ರಾಷ್ಟ್ರೀಯ ಶ್ರೇಷ್ಠತಾ ಪ್ರಶಸ್ತಿ ನೀಡಲಾಯಿತು.




ಕ್ಸೇವಿಯರ್ ಉನ್ನತ ಶಿಕ್ಷಣ ಮಂಡಳಿಯ 25ನೇ ತ್ರೈವಾರ್ಷಿಕ ಸಭೆಯ ಬಳಿಕ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು.